ಸಾಕ್ಷಿಯನ್ನು ದಿಃ 16-06-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ. ಆರ್ ವಿ ಹೆಚ್( ಪ್ರತಿವಾದಿ ನಂ.3 ರ ಪರವಾಗಿ)**

ಈ ಪ್ರಕರಣದ ವಾದಿ ಪ್ರತಿವಾದಿಯರ ಮಾಹಿತಿ ಇದೆ. ಈ ದಾವೆಯನ್ನು ನಾವೇ ಪ್ರತಿವಾದಿಯರ ವಿರುದ್ಧ ದಾಖಲಿಸಿದ್ದೇವೆ. ವಾದ ಪತ್ರ ಬರೆಯಲು ನಾವೇ ಮಾಹಿತಿ ನೀಡಿದ್ದೇವೆ. ಈ ದಾವೆಯನ್ನು ಬರೆಯಲು ನಮ್ಮ ತಂದೆ ಗುರಯ್ಯ ಮಾಹಿತಿ ನೀಡಿದ್ದಾರೆ ಎಂದರೆ ಸರಿ. ವಾದ ಪತ್ರದಲ್ಲಿ ಬರೆದ ಎಲ್ಲಾ ವಿಷಯ ಸುಳ್ಳು ಇದೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯನ್ನು ನಾನೇ ಹೇಳಿ ಬರೆಯಿಸಿದ್ದೇನೆ. ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇದೆ. ಒಟ್ಟು ಎರಡು ಹೊಲ ಹಾಗೂ ಎರಡು ಮನೆಗಳಿವೆ. ದಾವಾ ಆಸ್ತಿಗಳು 4 ನೇ ಪ್ರತಿವಾದಿ ಹೆಸರಿಗೆ ಇದ್ದವು ಎಂದರೆ ಖೊಟ್ಟಿ ರೀತಿಯಿಂದ ಹೆಸರು ಹಚ್ಚಿಕೊಂಡಿದ್ದಾನೆ ಎಂದು ಹೇಳುತ್ತಾರೆ. 4 ನೇ ಪ್ರತಿವಾದಿ ಖೊಟ್ಟಿ ರೀತಿಯಿಂದ ಹೆಸರು ಹಚ್ಚಿಕೊಂಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.175/2 ಕ್ಷೇತ್ರ 5 ಎಕರೆ 32 ಗುಂಟೆ ಜಮೀನು ಪ್ರತಿವಾದಿ ನಂ.4 ಹೆಸರಿನಲ್ಲಿ ಇರುವುದನ್ನು ಖಚಿತಪಡಿಸಿಕೊಂಡು ಪ್ರತಿವಾದಿ ನಂ.3 ದಿಃ10.03.2022 ರಂದು ಸದರಿ ಆಸ್ತಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ 3 ನೇ ಪ್ರತಿವಾದಿಯ ಹೆಸರು ದಾವಾ ಆಸ್ತಿಗೆ ದಾಖಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಒಪ್ಪಿಗೆ ಇಲ್ಲದೇ ಖರೀದಿ ಪತ್ರ ಮ್ಯುಟೇಶನ್ ಮಾಡಿದ್ದಾರೆ ಎಂದು ಹೇಳುತ್ತಾರೆ. ಸದರಿ ಆಸ್ತಿಯ ಮೇಲೆ 3 ನೇ ಪ್ರತಿವಾದಿ ನಂ.3 ಬ್ಯಾಂಕ್ ಸಾಲ ಪಡೆದಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆ ಸಾಲಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ಸರ್ವೇ ನಂಬರ 175/2 ರಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ಪ್ರತಿವಾದಿ ನಂ.3 ಮಾಲೀಕರಾಗಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.